2017 ಕ.ತೀ.ವ 630

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್

ಶ್ರೀ ಲಕ್ಷ್ಮೀ ವಿದ್ಯಾವರ್ಧಕ ಸಂಘ –ವಿರುದ್ಧ– ಸೊಸೈಟಿಗಳ ಜಿಲ್ಲಾ ರಿಜಿಸ್ಟ್ರಾರ್, ವಿಜಯಪುರ*

ಭಾರತ ಸಂವಿಧಾನದ 226 ಹಾಗೂ 227ರ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ

ಸಾರ್ವಜನಿಕ ಕಾನೂನಿನಲ್ಲಿ ಸಿಂಧುವಾದ ನೋಟೀಸಿನ ಅಗತ್ಯತೆಯನ್ನು ಈ ತೀರ್ಪಿನಲ್ಲಿ ಚರ್ಚಿಸಲಾಗಿದೆ.

ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರ – ಸೊಸೈಟಿಯೂ, ಸೊಸೈಟಿಗಳ ಜಿಲ್ಲಾ ರಿಜಿಸ್ಟ್ರಾರ್, ವಿಜಯಪುರ ಇವರು ದಿನಾಂಕ 31.08.2015ರಂದು ಕರ್ನಾಟಕ ಸೊಸೈಟಿಗಳ ನೋಂದಣಿ ನಿಯಮ, 1961ರ 8ನೇ ನಿಯಮದ ಅಡಿಯಲ್ಲಿ ಹೊರಡಿಸಿದ ನೋಟೀಸ್‌ನ್ನು ಆಕ್ಷೇಪಿಸಿದೆ. ನೋಟೀಸಿನಲ್ಲಿ ಕಾನೂನಿಗೆ ಪ್ರತಿಕೂಲವಾಗಿ ಸೊಸೈಟಿಯೂ ಕಾರ್ಯ ನಿರ್ವಹಿಸುತ್ತಿದೆ ಎಂದು ಮತ್ತು ಅದು ಸಿದ್ಧಪಡಿಸಿರುವ ಮಾಹಿತಿಯೂ ಸರಿಯಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ 25(1)ನೇ ಪ್ರಕರಣದ ಅಡಿಯಲ್ಲಿ ಸೊಸೈಟಿಯ ಕರ್ತವ್ಯ ನಿರ್ವಹಣೆಯ ಸಂಬಂಧದಲ್ಲಿ ತನಿಖೆ ನಡೆಸಲು ಪ್ರಸ್ತಾಪಿಸಿರುವುದನ್ನು ನೋಟೀಸಿನಲ್ಲಿ ವ್ಯಕ್ತಪಡಿಸಿದೆ ಮತ್ತು ಅರ್ಜಿದಾರ – ಸೊಸೈಟಿ ತನ್ನ ಯಾವುದೇ ಅಭಿಪ್ರಾಯಗಳನ್ನು ಏಳು ದಿನಗಳೊಳಗೆ ಸಲ್ಲಿಸಬಹುದು ಎಂದು ನೋಟೀಸಿನಲ್ಲಿ ತಿಳಿಸಲಾಗಿರುತ್ತದೆ.

*ರಿಟ್ ಅರ್ಜಿ ಸಂಖ್ಯೆ: 205101/2015 (ಜಿಎಂ–ಕೆಎಸ್ಆರ್), ದಿನಾಂಕ: 29ನೇ ಸೆಪ್ಟೆಂಬರ್, 2015.

**ಮೇಲೆ ಹೇಳಲಾದ ಅಭಿಪ್ರಾಯಗಳನ್ನು ಹೊರತುಪಡಿಸಿ, ನೋಟೀಸಿನಲ್ಲಿ ಅರ್ಜಿದಾರ – ಸೊಸೈಟಿಯ ವಿರುದ್ಧ ಯಾವುದೇ ನಿರ್ದಿಷ್ಟ ಆಪಾದನೆಗಳು ಒಳಗೊಂಡಿರುವುದಿಲ್ಲ. ನೋಟೀಸಿನಲ್ಲಿ ಕಾನೂನಿಗೆ ಪ್ರತಿಕೂಲವಾಗಿ ಸೊಸೈಟಿ ಹೇಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಸಹ ಸ್ಪಷ್ಟವಾಗಿ ಹೇಳಿರುವುದಿಲ್ಲ. ಅದರಲ್ಲಿ ಸೊಸೈಟಿಯೂ ಸಿದ್ಧಪಡಿಸಿದ ಯಾವ ಮಾಹಿತಿ ಸರಿಯಾಗಿಲ್ಲ ಎಂಬುದನ್ನು ಸಹ ಸ್ಪಷ್ಟವಾಗಿ ಹೇಳಿರುವುದಿಲ್ಲ. ಈ ಸಂದರ್ಭದಲ್ಲಿ ನಿರ್ದಿಷ್ಟ ಆಪಾದನೆಗಳು ಇಲ್ಲದಿರುವಾಗ ಯಾವುದಕ್ಕೆ ಪ್ರತ್ಯುತ್ತರ ನೀಡಬೇಕು? ಎಂಬುದು ಪ್ರಶ್ನೆಯಾಗಿದೆ.**

**ಮೇಲಿನ ತೀರ್ಮಾನದಲ್ಲಿ ಈ ನ್ಯಾಯಾಲಯವು ನೀಡಿರುವ ಕಾನೂನಿನ ಬೆಳಕಿನಲ್ಲಿ, ದಿನಾಂಕ 31.08.2015ರಲ್ಲಿನ ಆಕ್ಷೇಪಿತ ನೋಟೀಸು ಅರ್ಜಿದಾರ–ಸೊಸೈಟಿ ವಿರುದ್ಧ ಯಾವುದೇ ಆಪಾದನೆಗಳನ್ನು ಒಳಗೊಂಡಿರುವುದಿಲ್ಲ. ಆದುದರಿಂದ ಕಾನೂನಿನಲ್ಲಿ ಈ ನೋಟೀಸು ಅಸಮರ್ಥನೀಯವಾದುದಾಗಿದೆ. ಅದಕ್ಕನುಸಾರವಾಗಿ ನೋಟೀಸನ್ನು ರದ್ದುಗೊಳಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆ*** | ***ಪ್ಯಾರಾದಲ್ಲಿ*** |
|---|---|
| *1. ಐಎಲ್ಆರ್ 2012 ಕೆಎಆರ್ 448<br>ಸಿನ್ಹಾ ಎಸ್.ಎನ್. –ವಿರುದ್ಧ–<br>ಕರ್ನಾಟಕ ರಾಜ್ಯ* | *(ಉಲ್ಲೇ) 1* |

ಅರ್ಜಿದಾರರ ಪರ: ಶ್ರೀ ಐ.ಆರ್. ಬಿರಾದರ್, ವಕೀಲರು,
ಪ್ರತ್ಯರ್ಜಿದಾರರ ಪರ: ಶ್ರೀ ಎ. ಸೈಯದ್ ಹಬೀಬ್ ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್ (ಮೌಖಿಕ):**

ಸಾರ್ವಜನಿಕ ಕಾನೂನಿನಲ್ಲಿ ನೋಟೀಸಿನ ಅಗತ್ಯತೆ ಎಷ್ಟಿದೆ?

ಈ ಪ್ರಶ್ನೆಗೆ ಈಗಾಗಲೇ ಈ ನ್ಯಾಯಾಲಯದಲ್ಲಿ ***ಸಿನ್ಹಾ – ವಿರುದ್ಧ– ಕರ್ನಾಟಕ ರಾಜ್ಯ*** [1], ಪ್ರಕರಣದಲ್ಲಿ ಉತ್ತರಿಸಲಾಗಿರುತ್ತದೆ, ಸದರಿ ತೀರ್ಮಾನದ ಬೆಳಕಿನಡಿಯಲ್ಲಿ ಈ ರಿಟ್ ಅರ್ಜಿಯಲ್ಲಿ ಆಕ್ಷೇಪಿತ ನೋಟೀಸಿನ ಸಿಂಧುತ್ವವನ್ನು ವಿಚಾರಣೆ ಮಾಡಬೇಕಾಗಿದೆ.

2. ಇಬ್ಬರೂ ಪಕ್ಷಕಾರರ ಮಾನ್ಯ ನ್ಯಾಯವಾದಿಗಳು ಸಮ್ಮತಿಯ ಮೂಲಕ, ಅರ್ಜಿಯ ಗುಣಾರ್ಹತೆಯ ಮೇಲಿನ ವಾದಗಳನ್ನು ಆಲಿಸಲಾಗಿದೆ ಮತ್ತು ಈ ಆದೇಶದ ಮೂಲಕ ವಿಲೇ ಮಾಡಲಾಗಿದೆ. ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರ – ಸೊಸೈಟಿಯೂ, ಸೊಸೈಟಿಗಳ ಜಿಲ್ಲಾ ರಿಜಿಸ್ಟ್ರಾರ್, ವಿಜಯಪುರ ಇವರು ದಿನಾಂಕ 31.08.2015ರಂದು ಕರ್ನಾಟಕ ಸೊಸೈಟಿಗಳ ನೋಂದಣಿ ನಿಯಮ, 1961ರ 8ನೇ ನಿಯಮದ ಅಡಿಯಲ್ಲಿ ಹೊರಡಿಸಿದ ನೋಟೀಸ್‌ನ್ನು ಆಕ್ಷೇಪಿಸಿರುವರು. ನೋಟೀಸಿನಲ್ಲಿ ಕಾನೂನಿಗೆ ಪ್ರತಿಕೂಲವಾಗಿ ಸೊಸೈಟಿಯೂ ಕಾರ್ಯ ನಿರ್ವಹಿಸುತ್ತಿದೆ ಎಂದು ಮತ್ತು ಅದು ಸಿದ್ದಪಡಿಸಿರುವ ಮಾಹಿತಿಯೂ ಸರಿಯಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ 25(1)ನೇ ಪ್ರಕರಣದ ಅಡಿಯಲ್ಲಿ ಸೊಸೈಟಿಯ ಕರ್ತವ್ಯ ನಿರ್ವಹಣೆಯ ಸಂಬಂಧದಲ್ಲಿ ತನಿಖೆ ನಡೆಸಲು ಪ್ರಸ್ತಾಪಿಸಿರುವುದನ್ನು ನೋಟೀಸಿನಲ್ಲಿ ವ್ಯಕ್ತಪಡಿಸಿದೆ ಮತ್ತು ಅರ್ಜಿದಾರ–ಸೊಸೈಟಿ ತನ್ನ ಯಾವುದೇ ಅಭಿಪ್ರಾಯಗಳನ್ನು ಏಳು ದಿನಗಳೊಳಗೆ ಸಲ್ಲಿಸಬಹುದು ಎಂದು ನೋಟೀಸಿನಲ್ಲಿ ತಿಳಿಸಲಾಗಿರುತ್ತದೆ.

3. ಮೇಲೆ ಹೇಳಲಾದ ಅಭಿಪ್ರಾಯಗಳನ್ನು ಹೊರತುಪಡಿಸಿ, ನೋಟೀಸಿನಲ್ಲಿ ಅರ್ಜಿದಾರ – ಸೊಸೈಟಿಯ ವಿರುದ್ಧ ಯಾವುದೇ ನಿರ್ದಿಷ್ಟ ಆಪಾದನೆಗಳು ಒಳಗೊಂಡಿರುವುದಿಲ್ಲ. ನೋಟೀಸಿನಲ್ಲಿ ಕಾನೂನಿಗೆ ಪ್ರತಿಕೂಲವಾಗಿ ಸೊಸೈಟಿ ಹೇಗೆ ಕಾರ್ಯ ನಿರ್ವಹಿಸತ್ತಿದೆ ಎಂಬುದನ್ನು ಸಹ ಸ್ಪಷ್ಟವಾಗಿ ಹೇಳಿರುವುದಿಲ್ಲ. ಅದರಲ್ಲಿ ಸೊಸೈಟಿಯೂ ಸಿದ್ಧಪಡಿಸಿದ ಯಾವ ಮಾಹಿತಿ ಸರಿಯಾಗಿಲ್ಲ ಎಂಬುದನ್ನು ಸಹ ಸ್ಪಷ್ಟವಾಗಿ ಹೇಳಿರುವುದಿಲ್ಲ. **ಈ ಸಂದರ್ಭದಲ್ಲಿ ನಿರ್ದಿಷ್ಟ ಆಪಾದನೆಗಳು ಇಲ್ಲದಿರುವಾಗ ಯಾವುದಕ್ಕೆ ಪ್ರತ್ಯುತ್ತರ ನೀಡಬೇಕು?** ಎಂಬುದು ಪ್ರಶ್ನೆಯಾಗಿದೆ.

1. ಐಎಲ್‌ಆರ್ 2012 ಕೆಎಆರ್ 448

4. ಸಹಜ ನ್ಯಾಯವು ಯುಕ್ತ ನೋಟೀಸನ್ನು ಅವಶ್ಯವಾಗಿ ಅಗತ್ಯಪಡಿಸಿದೆ. ಸಾರ್ವಜನಿಕ ಕಾನೂನಿನಲ್ಲಿ, ನೋಟೀಸಿನ ಅಗತ್ಯತೆಗಳನ್ನು ಈ ನ್ಯಾಯಾಲಯದಲ್ಲಿನ ***ಸಿನ್ಹಾ ಎಸ್.ಎನ್. –ವಿರುದ್ಧ– ಕರ್ನಾಟಕ ರಾಜ್ಯ*** (ಮೇಲಿನ), ಪ್ರಕರಣದಲ್ಲಿ ಸ್ಪಷ್ಟಪಡಿಸುತ್ತದೆ. ಸ್ಪಷ್ಟಪಡಿಸಿದ ವಿವರಗಳು ಮುಂದಿನಂತಿದೆ:

> *“ .. . . . . . . . . . . . . . . . . . . . ಕಾನೂನಿನಲ್ಲಿ ಯಾವಾಗ ನೋಟೀಸು ಸಿಂಧುವಾಗಿದೆ ಎಂದು ಹೇಳಬಹುದಾಗಿದೆ. ನೋಟೀಸು ಎಂಬ ಪದದ ಮೂಲವು ಲ್ಯಾಟಿನ್ ಪದ “ನೋಟಿಟಿಯ” ಎಂಬ ಪದದಿಂದ ಬಂದಿರುತ್ತದೆ. “ನೋಟಿಟಿಯ” ಎಂದರೆ “ಪೂರ್ಣವಾದ ತಿಳುವಳಿಕೆ” ಇದು ಮಾಹಿತಿ. ಗುಪ್ತವಾರ್ತೆ ಅಥವಾ ಜ್ಞಾನ, ಅರಿವು ಪದಗಳಿಗೆ ಸಮಾನವಾಗಿದೆ. ಯಾವುದೇ ಸುನಾವಣೆಯಲ್ಲಿ ನೋಟೀಸು ಪ್ರಾರಂಭಿಕ ಅಂಶವಾಗಿದೆ. ಯಾವುವೇ ಆಡಳಿತಾತ್ಮಕ ನ್ಯಾಯ ನಿರ್ಣಯ ಮಂಡಿಸಲು, ನ್ಯಾಯಯುತವಾದ ಸುನಾವಣೆಯು ಪ್ರತಿಯೊಂದು ಹಂತದಲ್ಲೂ, ನೋಟೀಸು ಒಳಗೊಳ್ಳುತ್ತವೆ. ಅಂತಿಮ ಇತ್ಯರ್ಥಗಳು ಈ ನೋಟಿಸಿನಿಂದಲೇ ಪ್ರಾರಂಭವಾಗುತ್ತದೆ. ನೋಟೀಸು ನ್ಯಾಯಯುತ ನಿಯಮದಲ್ಲಿ ಸೇರಿದೆ ಮತ್ತು ಅದು ಪ್ರತಿಕೂಲ ಆದೇಶದ ಪೂರ್ವಭಾವಿಯಾಗಿರಬೇಕು. ನೋಟೀಸು ಸ್ಪಷ್ಟವಾಗಿರತಕ್ಕದ್ದು ಮತ್ತು ಅದು ಯಾವ ಕಾರಣಕ್ಕಾಗಿ ಪಕ್ಷಕಾರರ ಹಾಜರಿಯನ್ನು ಮತ್ತು / ಅಥವಾ ಅವರ ಪ್ರತ್ಯುತ್ತರದ ಅಗತ್ಯತೆಯನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು. ಪಕ್ಷಕಾರನಿಗೆ ಸಂಬಂಧಪಟ್ಟ ಅವನ ಆಧಾರಿತ ಮೊಕದ್ದಮೆಯ ವಿರುದ್ಧ ಇರುವ ಯಾವುದೇ ಸಾಕ್ಷ್ಯವನ್ನು ಒದಗಿಸುವುದಕ್ಕೆ ಮತ್ತು ಸದರಿ ಸಾಕ್ಷ್ಯವನ್ನು ಖಂಡಿಸುವುದಕ್ಕೆ ಅವನಿಗೆ ಅವಕಾಶವನ್ನು ನೀಡತಕ್ಕದ್ದು. ನೋಟೀಸು ಕಾನೂನಿನಲ್ಲಿ ಸಿಂಧುವಾಗಿದೆ, ಅದು ಸಂಬಂಧಪಟ್ಟ ಪಕ್ಷಕಾರನ ವಸ್ತು ವಿಷಯವನ್ನು ನೆರವೇರಿಸುವುದಕ್ಕೆ ಮೊಕದ್ದಮೆಯ ಸಾಕಷ್ಟು ಮಾಹಿತಿಯನ್ನು*

*ಸ್ಪಷ್ಟವಾಗಿ ಮತ್ತು ನಿಖರವಾಗಿ ನೋಟೀಸಿನಲ್ಲಿ ಕೊಡತಕ್ಕದ್ದು. ಸಾಪೇಕ್ಷ ಪದಗಳಿಂದ ನೋಟೀಸು ಪರ್ಯಾಪ್ತವಾಗಿರಬೇಕು ಮತ್ತು ಪ್ರತಿಯೊಂದು ಮೊಕದ್ದಮೆಯನ್ನು ಉಲ್ಲೇಖದೊಂದಿಗೆ ನಿರ್ಧರಿಸಬೇಕು. ನೋಟೀಸಿನ ಪರ್ಯಾಪ್ತತೆಯನ್ನು ಪರಿಶೀಲಿಸದಾಗ ಅದು ಸಂಬಂಧಪಟ್ಟ ವ್ಯಕ್ತಿಗೆ ಸೂಕ್ತ ಮಾಹಿತಿಯನ್ನು ನೀಡುವುದಕ್ಕೆ ಮತ್ತು ಪರಿಣಾಮಕಾರಿ ಪ್ರತಿವಾದ ಮಾಡುವುದಕ್ಕೆ ಸಾಧ್ಯವಾಗುವಮತೆ ಇರತಕ್ಕದ್ದು. ನೋಟೀಸು ಅಸ್ಪಷ್ಟವಾಗಿದ್ದರೆ ಅಥವಾ ಅದು ನಿರ್ದಿಷ್ಟತೆಯನ್ನು ಒಳಗೊಂಡಿರದಿದ್ದರೆ ಅಥವಾ ನಂಬಲರ್ಹವಾಗಿರದ ಆಪಾದನೆಗಳಾಗಿದ್ದರೆ ಅದು ಸುನಾವಣೆ ಮಾಡಲು ಯುಕ್ತ ಅವಕಾಶವನ್ನು ಅಲ್ಲಗಳೆದಿದೆ ಎಂದು ಇಂಗಿತವಾಗುತ್ತದೆ. ಸ್ವಾಭಾವಿಕ ನ್ಯಾಯವು ಯುಕ್ತ ಕಾನೂನು ಪ್ರಕ್ರಿಯೆಯ ಅಗತ್ಯತೆಯನ್ನು ಮಾತ್ರ ಅಪೇಕ್ಷಿಸುವುದಿಲ್ಲ. ಅದು ಒಳ್ಳೆಯ ಆಡಳಿತದ ಕರಾರುವಕ್ಕಾದ ಅಂಶಗಳನ್ನೂ ಸಹ ಅಪೇಕ್ಷಿಸುತ್ತದೆ.”*

(ನನ್ನಿಂದ ಒತ್ತು ನೀಡಲಾಗಿದೆ)

5. ಮೇಲಿನ ತೀರ್ಮಾನದಲ್ಲಿ ಈ ನ್ಯಾಯಾಲಯವು ನೀಡಿರುವ ಕಾನೂನಿನ ಬೆಳಕಿನಲ್ಲಿ, ದಿನಾಂಕ 31.08.2015ರಲ್ಲಿನ ಆಕ್ಷೇಪಿತ ನೋಟೀಸು ಅರ್ಜಿದಾರ–ಸೊಸೈಟಿ ವಿರುದ್ಧ ಯಾವುದೇ ಆಪಾದನೆಗಳನ್ನು ಒಳಗೊಂಡಿರುವುದಿಲ್ಲ. ಆದುದರಿಂದ ಕಾನೂನಿನಲ್ಲಿ ಈ ನೋಟೀಸು ಅಸಮರ್ಥನೀಯವಾದುದಾಗಿದೆ. ಅದಕ್ಕನುಸಾರವಾಗಿ ನೋಟೀಸನ್ನು ರದ್ದುಗೊಳಿಸಲಾಗಿದೆ.

6. ನ್ಯಾಯಾಲಯವು, ಅರ್ಜಿದಾರ – ಸೊಸೈಟಿ ಈ ನ್ಯಾಯಾಲಯದ ಬಳಿ ಬರಲು ಕಾರಣವಾಗಿ ಅನಾವಶ್ಯಕವಾಗಿ ಹಣವನ್ನು ವೆಚ್ಚ ಮಾಡಲು ಕಾರಣಕರ್ತವಾದ ಪ್ರತ್ಯರ್ಜಿದಾರರು 10,000/– ರೂಪಾಯಿಗಳ (ಹತ್ತು ಸಾವಿರ ರೂಪಾಯಿಗಳು) ವೆಚ್ಚಗಳನ್ನು ಪಾವತಿಸಲು ಪ್ರತ್ಯರ್ಜಿದಾರರಿಗೆ ನಿರ್ದೇಶಿಸುತ್ತದೆ. ಪ್ರತ್ಯರ್ಜಿದಾರರು ಇವತ್ತಿನಿಂದ ನಾಲ್ಕು ವಾರಗಳೊಳಗೆ ಈ ನ್ಯಾಯಾಲಯದಲ್ಲಿ ವೆಚ್ಚವನ್ನು ಠೇವಣಿ ಇಡತಕ್ಕದ್ದು. ಅಂಥ ಠೇವಣಿಯನ್ನು ಅರ್ಜಿದಾರರು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ರಾಜ್ಯ ಸರ್ಕಾರವು, ಈ ವೆಚ್ಚವನ್ನು ಆಕ್ಷೇಪಿತ ನೋಟೀಸನ್ನು ಜಾರಿ ಮಾಡಿದ ಆ ಯಾರೇ ಅಧಿಕಾರಿಯಿಂದ ಮರು ಸಂದಾಯ ಮಾಡಿಕೊಳ್ಳುವುದಕ್ಕೆ ಹಕ್ಕನ್ನು ಹೊಂದಿರತಕ್ಕದ್ದು.

7. ಶಾಸನಾಧಿಕಾರವನ್ನು ಚಲಾಯಿಸುವ ಸರ್ಕಾರಿ ಅಧಿಕಾರಿಗಳು/ಶಾಸನಾತ್ಮಕ ಪ್ರಾಧಿಕಾರಿಗಳು ಜಾರಿ ಮಾಡಿದ ಸಾಕಷ್ಟು ನೋಟೀಸುಗಳು ನನ್ನ ಗಮನಕ್ಕೆ ಬಂದಿರುತ್ತದೆ. ಅವುಗಳಲ್ಲಿ ಸಾಕಷ್ಟು ನೋಟೀಸುಗಳು ಅಸ್ಪಷ್ಟವಾಗಿರುತ್ತವೆ ಮತ್ತು ಯಾರ ವಿರುದ್ಧ ನೋಟೀಸನ್ನು ಜಾರಿ ಮಾಡಿರುತ್ತದೆ ಅವರ ವಿರುದ್ಧ ಯಾವುದೇ ನಿರ್ದಿಷ್ಟ ಆಪಾದನೆಗಳು ಒಳಗೊಂಡಿರುವುದಿಲ್ಲ. ಇದರಿಂದ ಅಂಥ ಪ್ರದತ್ತವಾದ ಅಧಿಕಾರವನ್ನು ಬಳಸಿ ಸಂಬಂಧಪಟ್ಟ ವ್ಯಕ್ತಿಗೆ ಕಿರುಕುಳ ನೀಡುವ ಉದ್ದೇಶವನ್ನು ಇಲ್ಲಿ ಕಾಣಬಹುದಾಗಿದೆ. ಅಂಥ ನೋಟೀಸನ್ನು ಜಾರಿ ಮಾಡಿದ್ದಕ್ಕಾಗಿ ಆ ಅಧಿಕಾರಿ ಅಥವಾ ಪ್ರಾಧಿಕಾರಿಯನ್ನು ಹೊಣೆ ಮಾಡತಕ್ಕದ್ದು ಮತ್ತು ಅಂಥವರು 'ಸಾರ್ವಜನಿಕ ಕಚೇರಿಯಲ್ಲಿ ಅಕ್ರಮವಾದ ಕೆಲಸ ಮಾಡಿದವರು' ಎಂಬ ಹೊಣೆಗಾರಿಕೆಗೆ ಗುರಿಯಾಗತಕ್ಕದ್ದು ಮತ್ತು ತತ್ಪರಿಣಾಮವಾಗಿ, ಸಂಬಂಧಪಟ್ಟ ವ್ಯಕ್ತಿಗೆ ಆದ ನಷ್ಟವನ್ನು ಮತ್ತು ಪರಿಹಾರೋಪಕ್ಕೆ ಭರಿಸಿದ ವೆಚ್ಚವನ್ನು ಪರಿಹಾರ ರೂಪದಲ್ಲಿ ಪಡೆಯತಕ್ಕದ್ದು.

8. ಅಧಿಕಾರಿಗಳು/ಪ್ರಾಧಿಕಾರಿಗಳು ಸಾರ್ವಜನಿಕ ಕಾನೂನಿನಲ್ಲಿ ಸಿಂಧುವಾದ ನೋಟೀಸಿನ ಅಗತ್ಯತೆಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ತದನುಸಾರವಾಗಿ, ಈ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್ ಅವರು ಈ ಆದೇಶದ ಪ್ರತಿಯನ್ನು, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ರಾಜ್ಯದಲ್ಲಿನ ಎಲ್ಲಾ ಅಧಿಕಾರಿಗಳಿಗೆ ಮತ್ತು ಶಾಸನಾತ್ಮಕ ಪ್ರಾಧಿಕಾರಗಳಿಗೆ ರಾಜ್ಯದ ವಿವಿಧ ಅಧಿನಿಯಮಗಳನ್ನು ತಿಳಿದುಕೊಳ್ಳುವ ಸಲುವಾಗಿ ಈ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್ ಅವರು ಕಳುಹಿಸತಕ್ಕದ್ದು.

ಅರ್ಜಿಯನ್ನು ವಿಲೇ ಮಾಡಲಾಗಿದೆ.

---